**17** ನೇ ಅಪರ ಲಘು ವ್ಯವಹಾರಗಳ ಹಾಗೂ ಎಸಿಎಂಎಂ ನ್ಯಾಯಾಲಯ, ಮೆಯೋಹಾಲ್ ವಿಭಾಗ, ಬೆಂಗಳೂರು (ಎಸ್.ಸಿ.ಸಿ.ಎಚ್-21)

ಸಿಸಿ ಸಂಖ್ಯೆ: 60038/2018

DW2

ದಿನಾಂಕಃ 05.04.2022 ರಂದು ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರುಃ | ರಮೇಶ್ ಪಟೇಲ್ |
| ತಂದೆಯ ಹೆಸರು | ದುರ್ಗಾರಾಮ್ |
| ವಯಸ್ಸು | 38 ವರ್ಷ |
| ವೃತ್ತಿ | ವ್ಯಾಪಾರ |
| ವಾಸಃ | ಸಾಯಿ ನಗರ ಬೆಂಗಳೂರು |

ಮುಖ್ಯ ವಿಚಾರಣೆ ಅರೋಪಿ ಪರ ವಕೀಲರಿಂದಃ

1. ನಾನು ಆರೋಪಿಯವರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ. 2014 ರಿಂದ ಪಿರ್ಯಾದುದಾರರು ನನಗೆ ಗೊತ್ತಿದ್ದಾರೆ. 2014 ರಲ್ಲಿ ಪಿರ್ಯಾದುದಾರರ ಕಂಪನಿಯಿಂದ ಶಾಂತಕುಮಾರ್ ಎನ್ನುವವರು ನನ್ನ ಬಳಿ ಬಂದು ನಮ್ಮೊಂದಿಗೆ ವ್ಯವಹಾರ ಮಾಡಿ ಒಳ್ಳೆಯ ರಿಯಾಯತಿಯನ್ನು ನೀಡುತ್ತೇವೆ ಎಂದು ತಿಳಿಸಿ ನನ್ನ ಬಳಿಯಿಂದ ಕಾಲು ರಾಮ್ ಪಟೇಲ್ ರವರಿಗೆ ಸಂಬಂಧಿಸಿದ 4 ಚೆಕ್ಕುಗಳನ್ನು ಪಡೆದುಕೊಂಡರು. ನಾನು ಕೆಲಸ ಮಾಡುತ್ತಿರುವ ಅಂಗಡಿಯ ಮಾಲೀಕರು ಕಾಲುರಾಮ್ ಪಟೇಲ್ ಆಗಿರುತ್ತಾರೆ. ನಾನು ನೀಡಿದ 4 ಚೆಕ್ಕುಗಳಲ್ಲಿ ಕೇವಲ ಸಹಿಯನ್ನು ಮಾತ್ರ ಮಾಡಲಾಗಿತ್ತು. ಸದರಿ ನಾಲ್ಕು ಚೆಕ್ಕುಗಳಲ್ಲಿ ಯಾವುದೇ ಬರವಣಿಗೆ ಮಾಡಿರಲಿಲ್ಲ. ಆ ನಂತರ ಪಿರ್ಯಾದುದಾರರು ತಿಂಗಳಲ್ಲಿ ವಸ್ತುಗಳನ್ನು 2 ವರ್ಷದ ವರೆಗೆ ನಮಗೆ ಸರಬರಾಜು ಮಾಡಿರುತ್ತಾರೆ. ಸದರಿ ವಸ್ತುಗಳ ಹಣವನ್ನು ವಾರಕ್ಕೆ ಕೆಲವೊಮ್ಮೆ ಚೆಕ್ಕಿನಲ್ಲಿ ಹಾಗೂ ಕೆಲವೊಮ್ಮೆ ನಗದಾಗಿ ಹಣ ಪಾವತಿಸುತ್ತಿದ್ದೇವು. ನಾವು ನೀಡುತ್ತಿದ್ದ ಚೆಕ್ಕಿನಲ್ಲಿ ಹಣ ಇಲ್ಲದಿದ್ದಾಗ ಅದು ನಗದೀಕರಣಗೊಳ್ಳುವ ಪೂವದಲ್ಲಿಯೇ ಅದರ ಹಣವನ್ನು ನಗದಾಗಿ ಪಾವತಿಸಿ ಚೆಕ್ಕನ್ನು ಹಿಂದಕ್ಕೆ ಪಡೆದುಕೊಳ್ಳುತ್ತಿದ್ದೇವು. ಆ ಪ್ರಕಾರ ಪಿರ್ಯಾದುದಾರರ ಬಳಿಯಿಂದ ಒಟ್ಟು 20 ಕ್ಕಿಂತ ಚೆಕ್ಕುಗಳನ್ನು ನಾವು ಹಿಂದಕ್ಕೆ ಪಡೆದುಕೂಂಡಿರುತ್ತೇವೆ.

2. ನಿಪಿ 17, ನಿಪಿ 18, 36, ಹಾಗೂ ನಿಪಿ 38 ರ ಇನ್ ವೈಸ್‌ಗಳಲ್ಲಿ ನನ್ನ ಸಹಿ ಇರುತ್ತದೆ. ಯಾವ ಇನ್ ವೈಸ್ ಗಳಲ್ಲಿ ನನ್ನ ಸಹಿ ಹಾಗೂ ಅಂಗಡಿಯ ಮೊಹರು ಇರುವುದಿಲ್ಲ ಅದು ನಮಗೆ ಸಬಂಧಪಟ್ಟಿರುವುದಿಲಲ. ಪಿರ್ಂನೂದುದಾರರಿಂದ ನಾವು ಯಾವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ.

ನಮ್ಮ ಹಾಗೂ ಪಿರ್ಯಾದುದಾರರ ನಡುವೆ ಹಣ ಪಾವತಿಸದಿದ್ದಾಗೆ ಅದಕ್ಕೆ ಬಡ್ಡಿ ಕೊಡಬೇಕೆನ್ನುವ ಕರಾರು ಆಗಿರುವುದಿಲ್ಲ. 2014 ರಿಂದ 2016 ರವರೆಗೆ ನಾವು ಪಿರ್ಯಾದುದಾರರೊಂದಿಗೆ ನಾವು ವ್ಯವಹಾರ ಮಾಡಿರುತ್ತೇವೆ. ಪಿರ್ಯಾದುದಾರರೊಂದಿಗೆ ನಾವು ವ್ಯವಾಹಾರ ಕೊನೆಗೊಳಿಸಿದಾಗ ಅವರಿಗೆ ಯಾವುದೇ ಬಾಕಿ ಹಣ ಕೊಡಲು ಇರಲಿಲ್ಲ. ನಮ್ಮ ವ್ಯವಹಾರ ಪಿರ್ಯಾದುದಾರರೊಂದಿಗೆ ಕೊನೆಗೊಂಡಾಗ ನಾನು ಶಾಂತಕುಮಾರ್ ರವರ ಬಳಿ ನಾನು ನೀಡಿದ ಚೆಕ್ಕನ್ನು ಹಿಂದಕ್ಕ ಕೊಡಿ ಎಂದು ಕೇಳಿದೆನು. ಅವರು ಹಿಂದುರುಗಿಸುತ್ತೇನೆ ಎಂದು ತಿಳಿಸಿ ಅದನ್ನು ನಮಗೆ ಹಿಂದುರುಗಿಸಿರುವುದಿಲ್ಲ. ಪಿರ್ಯಾದುದಾರರ ಕಂಪನಿಯ ಬೇರೆಯವರ ಬಳಿ ಚೆಕ್ ಹಿಂದುರುಗಿಸಿ ಎಂದು ಕೇಳಿರುವುದಿಲ್ಲ. ಪಿರ್ಯಾದುದಾರರ ಕಂಪನಿಯಿಂದ ಶಾಂತಕುಮಾರ್ ರವರು ಒಬ್ಬರೇ ನಮ್ಮ ಬಳಿ ಬರುತ್ತಿದ್ದ ಕಾರಣ ಅವರ ಬಳಿ ಮಾತ್ರ ಚೆಕ್ ಹಿಂದುರುಗಿಸಿಎಂದು ಕೇಳಿರುತ್ತೇನೆ. ನಾನು ಚೆಕ್ಕುಗಳನ್ನು ಶಾಂತಕುಮಾರ್ ರವರಿಗೆ ಮಾತ್ರ ನೀಡಿದ್ದೆನು.

3. ಆರೋಪಿಯವರು ನನ್ನ ಬಳಿ ಪಿರ್ಯಾದುದಾರರು ಖಾತೆಯನ್ನು ತೆರೆದಾಗ ಮಾತ್ರ ಚೆಕ್ಕುಗಳನ್ನು ಅವರಿಗೆ ಕೊಡಿ ಎಂದು ನನಗೆ ತಿಳಿಸಿದ್ದರು. ಆರೋಪಿಯವರು ಅಂಗಡಿಯ ಬಳಿ ಸಾಮಾನ್ಯವಾಗಿ ಇರುತ್ತಿರಲಿಲ್ಲ. ಅವರ ಅಂಗಡಿಯ ಲೇವಾದೇವಿ ವ್ಯವಹಾರಗಳನ್ನು ನನಗೆ ನೋಡಿಕೊಳ್ಳಲು ಬಿಟ್ಟಿದ್ದರು. ಆರೋಪಿಯವರು ಪಿರ್ಯಾದುದಾರರಿಗೆ ಈ ಪ್ರಕರಣದಲ್ಲಿ ತಿಳಿಸಿರುವ ವಿವಾದಿತ ಚೆಕ್ಕಿನ ಮೊತ್ತವನ್ನು ಕೊಡಲು ಇರುವುದಿಲ್ಲ. ಪಿರ್ಯಾದುದಾರರು ಆರೋಪಿಯವರು ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ.

ಪಿರ್ಯಾದುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಒ ಹೇ ಕೇ ಸ ಇದೆ

**17** ನೇ ಅಪರ ನ್ಯಾಯಾಧೀಶರು
ಮತ್ತು ಎ ಸಿ ಎಂ ಎಂ